# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 183 (5) |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 04.07.2023 |

| ಕ್ರ.ಸಂ. | ಪ್ರಶ್ನೆ |
|---|---|
| ಅ | ರಾಜ್ಯದಲ್ಲಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; |
| ಆ | ಬಂದಿದ್ದಲ್ಲಿ, ಆ ಸಮಸ್ಯೆಗಳಾವುವು ಮತ್ತು ಕೈಗಾರಿಕಾ ವಲಯದ ಬೇಡಿಕೆಗಳೇನು; ಇವುಗಳ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; |
| ಇ | ಕೈಗಾರಿಕೆಗಳು ಮುಂಬರುವ ದಿನಗಳಲ್ಲಿ ಮುಷ್ಕರ ನಡೆಸುವಂಥ ಪರಿಸ್ಥಿತಿ ಎದುರಾಗಿದ್ದು, ಇದರ ಪರಿಣಾಮ ಉತ್ಪಾದನಾ ವಲಯಕ್ಕೆ, ರಫ್ತಿಗೆ, ಉದ್ಯೋಗ ಭದ್ರತೆಗೆ ಧಕ್ಕೆ ತರಲಿದೆಯೇ; |
| ಈ | ಕೈಗಾರಿಕೆಗಳು ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸರ್ಕಾರದ ನಿಲುವೇನು? |

**ಉತ್ತರ**

ಹೌದು.

ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಈ ಕೆಳಕಂಡ ಬೇಡಿಕೆಗಳನ್ನು ಸಲ್ಲಿಸಿರುತ್ತಾರೆ.

| ಕೈಗಾರಿಕೆಗಳ ಬೇಡಿಕೆ | ಸರ್ಕಾರದ ಕ್ರಮ |
|---|---|
| ದಿನಾಂಕ 01.04.2023ರಿಂದ ಪೂರ್ವಾನ್ವಯವಾಗುವಂತೆ ವಿದ್ಯುತ್ ದರವನ್ನು ಹೆಚ್ಚಿಸಿದ್ದನ್ನು ಹಾಗೂ ಏಪ್ರಿಲ್ ಮತ್ತು ಮೇ 2023ರ ಬಾಕಿ ಮೊತ್ತವನ್ನು ಪಾವತಿಸಲು ಜೂನ್ 2023ರ ಬಿಲ್ಲಿನಲ್ಲಿ ಸೇರಿಸಿದ್ದು, ಇದರಿಂದ ಹೊರೆಯಾಗುತ್ತದೆ ಎಂದು ತಿಳಿಸಿರುತ್ತಾರೆ. | ದಿನಾಂಕ 01.04.2023ರಿಂದ ಪೂರ್ವಾನ್ವಯವಾಗುವಂತೆ ವಿದ್ಯುತ್ ದರವನ್ನು K.E.R.C. ನಿರ್ದೇಶನದನ್ವಯ ESCOMಗಳು ಹೆಚ್ಚಿಸಿರುತ್ತವೆ.<br><br>ಏಪ್ರಿಲ್ ಮತ್ತು ಮೇ 2023ರ ಬಾಕಿ ಮೊತ್ತವನ್ನು ಹಂತ ಹಂತವಾಗಿ ಪಾವತಿಸುವ ಸಂಬಂಧ ಸನ್ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚಿಸುವುದಾಗಿ ಮಾನ್ಯ ಇಂಧನ ಸಚಿವರು ದಿನಾಂಕ 28.06.2023ರಂದು ಕೈಗಾರಿಕಾ ಸಂಘಗಳೊಂದಿಗೆ ನಡೆದ ಸಭೆಯಲ್ಲಿ ತಿಳಿಸಿರುತ್ತಾರೆ. |
| ಕೈಗಾರಿಕೆಗಳಿಗೆ ಸ್ಥಳೀಯ ಸಂಸ್ಥೆಗಳು ವಿಧಿಸುತ್ತಿರುವ ಆಸ್ತಿ ತೆರಿಗೆಯು ಹೆಚ್ಚಾಗಿರುವುದಾಗಿ ಹಾಗೂ ಇದರ ಜೊತೆಯಲ್ಲಿ ಕೆ.ಐ.ಎ.ಡಿ.ಬಿ.ಯ ನಿರ್ವಹಣಾ ವೆಚ್ಚವನ್ನು ಸಹ ಪಾವತಿಸಲು ಹೊರೆಯಾಗುತ್ತದೆ ಎಂದು ತಿಳಿಸಿರುತ್ತಾರೆ. | ಈ ಸಮಸ್ಯೆಯನ್ನು ಬಗೆಹರಿಸಲು Karnataka Special Investment Region Act, 2022ನ್ನು ರಾಜ್ಯ ಸರ್ಕಾರವು ಹೊರತಂದಿದ್ದು, ಈ ಕಾಯ್ದೆಯಡಿ ಕೈಗಾರಿಕಾ ಪ್ರದೇಶಗಳನ್ನು ಅಧಿಸೂಚಿಸಿದರೆ, ಅವುಗಳು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಿಂದ ಹೊರಬರುವುದರಿಂದ, ಸಮಸ್ಯೆಯು ಪರಿಹಾರವಾಗಲಿದೆ. |
| ಎಥನಾಲ್ ಉತ್ಪಾದನಾ ಘಟಕಗಳು - ಕೇಂದ್ರ ಸರ್ಕಾರವು ಈ ಘಟಕಗಳಿಗೆ ಪ್ರೋತ್ಸಾಹಗಳನ್ನು ನೀಡಿ ಎಥನಾಲ್ ಉತ್ಪಾದನೆ ಪ್ರೋತ್ಸಾಹಿಸುತ್ತಿರುವುದರಿಂದ ರಾಜ್ಯ ಸರ್ಕಾರವು ಈ ಘಟಕಗಳಿಗೆ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ನೀಡಲು ಕೋರಿರುತ್ತಾರೆ. | ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| ನವೀಕರಿಸಬಹುದಾದ ಇಂಧನ ಉತ್ಪಾದನಾ ಯೋಜನೆಗಳು ರೈತರಿಂದ ಭೂಮಿಯನ್ನು ಭೋಗ್ಯದ ಮೇಲೆ ಪಡೆಯುವ ಭೂಮಿಯ ನೋಂದಣಿಗೆ ಮುದ್ರಾಂಕ ಶುಲ್ಕ ವಿನಾಯಿತಿ ಕೋರಿಕೆ. | ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |

<table>
<tr><td rowspan="2"></td><td rowspan="2"></td><td>ಹೈಬ್ರೀಡ್ ವೆಹಿಕಲ್ ಮೇಲಿನ GST ದರ ಇಳಿಕೆ ಮಾಡುವ ಕೋರಿಕೆ.</td><td>ಹೈಬ್ರೀಡ್ ವೆಹಿಕಲ್ ಮೇಲಿನ GST ದರ ಇಳಿಕೆಗೆ ಮನವಿ ಸಲ್ಲಿಸಿದ್ದು, ಈ ಮನವಿಯನ್ನು ಪರಿಗಣಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.</td></tr>
<tr><td colspan="2">ಕೈಗಾರಿಕೆಗಳ ಸಮಸ್ಯೆಗಳ ಕುರಿತು ರಾಜ್ಯ ಸರ್ಕಾರವು ಸಕಾರಾತ್ಮಕವಾಗಿ ಕ್ರಮ ಕೈಗೊಳ್ಳುತ್ತಿರುವುದರಿಂದ, ರಾಜ್ಯದಲ್ಲಿ ಉತ್ಪಾದನಾ ವಲಯಕ್ಕೆ, ರಫ್ತಿಗೆ ಹಾಗೂ ಉದ್ಯೋಗ ಭದ್ರತೆಗೆ ಯಾವುದೇ ಧಕ್ಕೆ ಇರುವುದಿಲ್ಲ.</td></tr>
</table>

**ಸಿಐ 142 ಎಸ್‌ಪಿಐ 2023**

**(ಎಂ.ಬಿ. ಪಾಟೀಲ)**

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು